

*With Best Compliments from:*

# M/s P. Balasubba Setty & Son.





The Founder of the firm : Late Sri P. Balasubba Setty

## MINE OWNERS – HOSPET

### Iron Ore Fines and Calibrated Iron Ore

**Corporate Office:**

P.B. No. 03, Hampi Road, HOSPET – 583 201,
Bellary Dist. Karnataka State
Phone: +91-8394-228332, Fax: +91-8394-226853.
E-mail: pbssons.2008@rediffmail.com




# ದಿವ್ಯಗ್ರಂಥಗಳ ಉಪಯುಕ್ತತೆ

ದೀರ್ಘ ಇತಿಹಾಸವಿರುವ ದೇಶಗಳಲ್ಲಿ ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ ಇವುಗಳಿಗೂ ಒಂದು ದೊಡ್ಡ ಪರಂಪರೆ ಇರುತ್ತದೆ. ಭಾರತದಲ್ಲಾದರೋ ಇವುಗಳ ವಿಸ್ತಾರ, ಆಳ ಹಾಗೂ ವೈವಿಧ್ಯತೆಗಳಿಗೆ ಕೊನೆಯೇ ಇಲ್ಲ. ಕೇವಲ ಧಾರ್ಮಿಕ ಸಾಹಿತ್ಯವನ್ನು ತೆಗೆದುಕೊಂಡರೂ ಕೂಡ, ಒಬ್ಬ ವ್ಯಕ್ತಿಯ ಜೀವನದಲ್ಲಿ ಓದಿ ಮುಗಿಸಲಾಗದಷ್ಟು , ಕೇವಲ ಮೇಲ್ನೋಟಕ್ಕೂ ಗಮನಿಸಲಾಗದಷ್ಟು ವಿಸ್ತಾರವಾದ ಗ್ರಂಥರಾಶಿ ಇಲ್ಲಿದೆ; ಒಂದೊಂದು ದರ್ಶನದ ಆಳವನ್ನು ಅಳೆಯಹೊರಟರೆ, ಕೊನೆಯಿಲ್ಲದ ಸೂಕ್ಷ್ಮಾತಿಸೂಕ್ಷ್ಮ ತಾತ್ತ್ವಿಕ ಶೂನ್ಯದಲ್ಲಿ ನೆಲೆಗಾಣದಷ್ಟು ಅಗಾಧತೆ ಇಲ್ಲಿದೆ. ಇತಿಹಾಸದುದ್ದಕ್ಕೂ ನಮ್ಮ ಸಂಸ್ಕೃತಿ ಕಂಡುಕೊಂಡಿರುವ ಜೀವನಾನುಭವ, ಧ್ಯೇಯಾದರ್ಶ, ತಾತ್ತ್ವಿಕ ನಿಲುವು, ಅನುಭವದ ಸತ್ಯಗಳು ಅತ್ಯಂತ ಅಚ್ಚರಿಯ ಭಾವವನ್ನು ಮೂಡಿಸುತ್ತವೆ. ಅನೇಕ ವೇಳೆ ಅಗಾಧತೆ, ವಿಸ್ತಾರ, ಆಳಗಳು ಮೇರೆ ಮೀರಿದರೆ ಗೊತ್ತುಗುರಿಯಿಲ್ಲದ ಗೊಂಡಾರಣ್ಯದಲ್ಲಿ ಅಂಡಲೆಯುವಂತೆ ನಮ್ಮನ್ನು ನಾವು ಕಳೆದುಕೊಳ್ಳುವ ಸಂಭವವಿದೆ; ಅಂಥ ಸಂದರ್ಭದಲ್ಲಿ ನಮ್ಮ ನಮ್ಮ ಆಯ್ಕೆ, ವಿಷಯದ ಪ್ರಸ್ತುತತೆ, ಪ್ರಾಯೋಗಿಕ ಗುರಿ – ಇವನ್ನು ಮತ್ತೆ ಮತ್ತೆ ಗುರುತಿಸಿಕೊಂಡು, ಯಾವ ಗ್ರಂಥಗಳನ್ನು ಎಷ್ಟು ಓದಬೇಕು, ಓದಿದ್ದರಲ್ಲಿ ಎಷ್ಟನ್ನು ಅಧ್ಯಯನ ಮಾಡಬೇಕು; ಜೀವನಕ್ಕೆ ಅತ್ಯುಪಯುಕ್ತವಾದ ಯಾವ ಗ್ರಂಥಗಳನ್ನು ಸದಾ ಬಳಿಯಲ್ಲೇ ಇಟ್ಟುಕೊಳ್ಳಬೇಕು – ಇವನ್ನು ನಿರ್ಧರಿಸಬೇಕು. ಜ್ಞಾನ ಸಾಗರಕ್ಕೆ ಮಿತಿಯಿಲ್ಲ; ಆಳವೂ ಅಗಮ್ಯ. ನಮ್ಮ ಸೀಮಿತ ಜೀವಿತಾವಧಿಯಲ್ಲಿ ನಮ್ಮ ಬೊಗಸೆಗೆ ದಕ್ಕುವ ಜ್ಞಾನವಾರಿಯು ಅತ್ಯುತ್ತಮವೂ, ನಮ್ಮ ಪಿಪಾಸೆಯನ್ನೆಲ್ಲ ಇಂಗಿಸಿ ಹೊಸಬದುಕಿನ ಚೇತನವನ್ನೀಯುವ ಅಮೃತಜಲವೇ ಆಗಬೇಕು. ಪುರಾತನ, ಆಧುನಿಕ ಗ್ರಂಥರಾಶಿಗಳೆಲ್ಲೆಲ್ಲ ಆಧ್ಯಾತ್ಮಿಕ ಸಾಧನೆಗಾಗಿಯೇ ಮೀಸಲಾಗಿಟ್ಟಿರುವ ಅನೇಕ ಗ್ರಂಥಗಳು ನಮ್ಮಲ್ಲಿ ಪ್ರಸಿದ್ಧವಾಗಿವೆ. ಅವುಗಳಲ್ಲಿ ಅತ್ಯಂತ ಜನಪ್ರಿಯವೂ, ಪ್ರಸಿದ್ಧವೂ, ಉಪಯುಕ್ತವೂ ಆದ ಶಾಸ್ತ್ರಗ್ರಂಥಗಳನ್ನು ಮಾತ್ರ ಹಲವು ಬಾರಿ ಓದಿಕೊಂಡರೂ ನಮಗೆ ಆಧ್ಯಾತ್ಮಿಕ ಸಾಧನೆಯನ್ನು ಕುರಿತ ಮೂಲಭೂತ ಭಾವನೆಗಳು ಲಭಿಸುವುವು. ಶ್ರೀರಾಮಕೃಷ್ಣರ ಜೀವನ, ಉಪದೇಶಗಳ ಬೆಳಕಿನಲ್ಲಿ ಈ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡುವ ಒಂದು ಹೊಸ ವಿಧಾನ ಇತ್ತೀಚೆಗೆ ಪ್ರಚಲಿತವಾಗುತ್ತಿದೆ. ಶಾಸ್ತ್ರವು ಹೇಳುವ ಆಧ್ಯಾತ್ಮಿಕ ವಿಚಾರಗಳಿಗೆಲ್ಲ ಅನುಭವವೇ ಆಧಾರವೂ, ಗುರಿಯೂ, ಆದರ್ಶವೂ ಆಗಿದೆ. ಆದ್ದರಿಂದ ಅಂಥ ಅನುಭವಗಳ ಗಣಿಯಾಗಿದ್ದ ಹಲವು ಮಂದಿ ಸಂತ–ಮಹಾತ್ಮರು ಶ್ರೀರಾಮಕೃಷ್ಣ ಪರಂಪರೆಯಲ್ಲಿ ಆಗಿಹೋಗಿದ್ದಾರೆ. ಈ ಮಹಾ ವ್ಯಕ್ತಿಗಳ ವಾಣಿಯನ್ನು ಆಧರಿಸಿದ ಕೆಲವು ಪ್ರಮುಖ ಗ್ರಂಥಗಳೂ 'ಆಧುನಿಕ ಆಧ್ಯಾತ್ಮಿಕ ಸಾಧನೆಯ ಗ್ರಂಥಗಳು' ಎಂಬ ಕೀರ್ತಿಗೆ ಭಾಜನವಾಗಿವೆ. ಈ ವಿಶೇಷ ಸಂಚಿಕೆಯಲ್ಲಿ ಶಾಸ್ತ್ರಗಳಿಂದ ಹಾಗೂ ಸಂತರ ವಾಣಿಯನ್ನಾಧರಿಸಿದ ಗ್ರಂಥಗಳಲ್ಲಿ ಕೆಲವು ಪ್ರಮುಖ ಕೃತಿಗಳನ್ನು ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದೇವೆ. ಅತಿ ವಿಸ್ತಾರವಾದೀತೆಂಬ ಭಯದಿಂದ ಇದನ್ನು ಹಿಂದೂಧರ್ಮಕ್ಕೆ ಮಾತ್ರ ಸೀಮಿತಗೊಳಿಸಿದ್ದೇವೆ. ಪ್ರಾಮಾಣಿಕ ಸಾಧಕರಿಗೆ ಇವು ಸಹಾಯವಾಗಬಲ್ಲೆದೆಂಬ ಭರವಸೆ ನಮ್ಮದು.

ಕೇವಲ ಸಾಧನೆಯನ್ನೇ ಗುರಿಯಾಗಿ ಇಟ್ಟುಕೊಂಡಿರುವ 'ವಿವೇಕ ಚೂಡಾಮಣಿ', 'ನಾರದ ಭಕ್ತಿಸೂತ್ರ', 'ಪಾತಂಜಲ ಯೋಗಸೂತ್ರ' ಗಳಂತಹ ಗ್ರಂಥಗಳು ಕೆಲವು; ಪ್ರಧಾನ ಗ್ರಂಥದ ಅಂಗವಾಗಿ ಅಲ್ಲಲ್ಲಿ ಸಾಧನೆಯ ವಿಚಾರಗಳು ಬರುವ 'ಯೋಗವಾಸಿಷ್ಠ', 'ಭಾಗವತ' ಗಳಂತಹ ಗ್ರಂಥಗಳು ಕೆಲವು. ಇನ್ನು ಸಾರ್ವತ್ರಿಕ ವಿಚಾರಗಳನ್ನು ತಿಳಿಸಿಕೊಡುವ ಆಧ್ಯಾತ್ಮಿಕ ಸಾಧನೆಗೂ, ಸಾಧಾರಣ ಜೀವನಕ್ಕೂ ಅನ್ವಯವಾಗುವ ವಿಶಿಷ್ಟ ತತ್ತ್ವಗಳನ್ನು ನೀಡುವ 'ಭಗವದ್ಗೀತೆ'ಯಂತಹ ದಿವ್ಯಗ್ರಂಥಗಳೂ ಇಲ್ಲಿ ಬರುತ್ತವೆ. ಹಂತಹಂತವಾಗಿ ಸಾಧಕನನ್ನು ಆರಂಭಿಕ ಹಂತದಿಂದ ಮುನ್ನಡೆಸಿ, ಕ್ರಮಬದ್ಧವಾಗಿ ಒಂದೊಂದೇ ಹೆಜ್ಜೆ ಕಲಿಸಿಕೊಟ್ಟು, ಸಾಧನೆಯ ಮಾರ್ಗದಲ್ಲಿ ಅವನನ್ನು ಪರಿಣಿತನನ್ನಾಗಿಸಿ, ಮುಂದೆ ಗುರು ಅಥವಾ ದೈವೀಕೃಪೆಯ ಪ್ರವಾಹದಲ್ಲಿ ತೇಲಿಬಿಡುವ ಈ ಶಾಸ್ತ್ರಗ್ರಂಥಗಳು ನಿಜವಾದ ಅರ್ಥದಲ್ಲಿ ಅಂಬಿಗನ ಪಾತ್ರವನ್ನು